**ದಿನಾಂಕಃ 16.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ವಾದಿಯು ನನ್ನ ಹೆಂಡತಿ, ಅವರು ತೀರಿಕೊಂಡಿರುತ್ತಾರೆ. ದಾವೆಯನ್ನು ಸರ್ವೇ ನಂ.102/4 ಕ್ಕೆ ಹೂಡಿರುತ್ತೇನೆ. ಇದೇ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯ ದೊಡ್ಡಬಳ್ಳಾಪುರದಲ್ಲಿ ಎಫ ಡಿ ಪಿ ನಂ.21/2013 ರಲ್ಲಿ ಪ್ರಕರಣವು ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಕೊರ್ಟ ಕಮೀಷನರ್ ರವರು ನೇಮಕಗೊಂಡಿರುತ್ತಾರೆ, ಸ್ವತ್ತು ಇನ್ನು ವಿಭಾಗವಾಗಿರುವುದಿಲ್ಲ. ದಾವಾಸ್ವತ್ತಿನಲ್ಲಿ ಪ್ರತಿವಾದಿಯರೆ ಸ್ವಾ ಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಯರು ದಾವಾಸ್ವತ್ತಿಗೆ ಸಂಬಂಧಿಸಿದಂತೆ ದಿವಾಣಿ ನ್ಯಾಯಾಲಯ ದೊಡ್ಡಬಳ್ಳಾಪುರದಲ್ಲಿ ದಾವಾ ನಂ.286/2014 ರಲ್ಲಿ ಹೂಡಿರುತ್ತಾರೆಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಅರ್ಜಿಯನ್ನು ವಜಾ ಮಾಡಿರುತ್ತಾರೆ ಹಾಗಾಗಿ ಈ ದಾವೆಯನ್ನು ಹೂಡಿರುತ್ತೇನೆ. ಅರ್ಜಿ ವಜಾಗೊಂಡಿರುವ ಬಗ್ಗೆ ವಕೀಲರಿಗೆ ತಿಳಿಸಿರುತ್ತೇನೆ, ಈ ದಾವೆಯಲ್ಲಿ ಅದನ್ನು ತಿಳಿಸಿದ ಬಗ್ಗೆ ಗೊತ್ತಿರುವುದಿಲ್ಲ. ಈ ದಾವೆಯಲ್ಲಿ ಅದರ ಬಗ್ಗೆ ಅದರ ಬಗ್ಗೆ ನಮೂದಿಸಿರುವುದಿಲ್ಲವೆಂದರೆ ಗೊತ್ತಿರುವುದಿಲ್ಲ.

ಓ ಎಸ್ ನಂ.286/2014 ಇನ್ನು ಚಾಲ್ತಿಯಲ್ಲಿರುತ್ತದೆ ಎಂದರೆ ಸದರಿ ಪ್ರಕರಣದಲ್ಲಿ ನಾನು ಸೇರ್ಪಡೆಯಾಗಿರುವುದಿಲ್ಲ ಹಾಗಾಗಿ ಅದರ ಬಗ್ಗೆ ಗೊತ್ತಿರುವುದಿಲ್ಲ. ಓ ಎಸ್ ನಂ.71/2012 ಹಾಗೂ ಎಫ ಡಿ ಪಿ ನಂ.21/2013 ರಲ್ಲಿ ಪ್ರತಿವಾದಿಯರು ಪಕ್ಷಗಾರರಾಗಿರುವುದಿಲ್ಲವೆಂದರೆ ಸರಿ. ಪ್ರತಿವಾದಿಯರು ಎಫ ಡಿ ಪಿ ನಂ.21/2013 ರ ಪ್ರಕಾರ ದಾವಾಸ್ವತ್ತು ಹಾಗೂ ಸರ್ವೆನಂ.351/1 ರಲ್ಲಿ ಸರ್ವೆಯನ್ನು ಮಾಡಿಸಲು ಹೋದಾಗ ತಕರಾರನ್ನು ಮಾಡಿರುತ್ತಾರೆಂದರೆ ಸರಿ.

ದಾವಾಸ್ವತ್ತನ್ನು ಕೆ ಐ ಡಿ ಬಿ ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ, ಆದರೆ ಪರಿಹಾರದ ಹಣ ನನಗೆ ಬಂದಿರುವುದಿಲ್ಲ. ಸ್ವಾಧೀನಪಡಿಸಿಕೊಂಡಂತಹ ಜಾಗದಲ್ಲಿ ಬೆಳವಣಿಗೆ ಕ್ರಮಗಳನ್ನು ಕೈಗೊಂಡಿರುತ್ತಾರೆಂದರೆ ಸರಿ. ಕೈಗಾರಿಕೆಯವರಿಗೆ ಸ್ವಾಧೀನಪಡಿಸಿಕೊಂಡಂತಹ ಜಾಗವನ್ನೂ ಸಹ ಮಾರಾಟ ಮಾಡಿರುತ್ತಾರೆಂದರೆ ಗೊತ್ತಿರುವುದಿಲ್ಲ. ದಾವಾಸ್ವತ್ತಿನಲ್ಲಿ ನಾನ ಆಗಲಿ, ಪ್ರತಿವಾದಿಯರಾಗಲಿ ಸ್ವಾ ಧೀನದಲ್ಲಿ ಇರುವುದಿಲ್ಲವೆಂದರೆ ನಾನೇ ಸ್ವಾಧೀನದಲ್ಲಿ ಇರುತ್ತೇನೆ. ಪ್ರತಿವಾದಿಯರು ದಿ.05.09.2021 ರಂದು ದಾವಾಸ್ವತ್ತಿನ ಸ್ವಾಧೀನದಲ್ಲಿದ್ದು ನನಗೆ ಯಾವುದೇ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾಸ್ವತ್ತಿಗೆ ಮೂಲ ಮಾಲೀಕರು ಮುನಿಯಪ್ಪರವರಾಗಿರುತ್ತಾರೆ ಹಾಗೂ ಅವರಿಗೆ 3 ಜನ ಮಕ್ಕಳಿರುತ್ತಾರೆ. ಅವರುಗಳು ತೀರುಮಳಪ್ಪ, ದೊಡ್ಡಆಂಜೀನಪ್ಪ ಹಾಗೂ ಚಿಕ್ಕಆಂಜೀನಪ್ಪರವರಾಗಿರುತ್ತಾರೆ. ಮುನಿಯಪ್ಪರವರ ಮರಣದ ನಂತರ ತೀರುಮಳಪ್ಪ ರವರು ಮನೆಯ ವ್ಯವಹಾರಗಳನ್ನು ನಡೆಸಿಕೊಂಡು ಹೋಗುತ್ತಿರುತ್ತಾರೆ ಹಾಗೂ ವಿಭಾಗವನ್ನು ದಿ.18.06.1993 ರಲ್ಲಿ ಮಾಡಿರುತ್ತಾರೆ. ಸದರಿ ವಿಭಾಗದಂತೆ ವಿಭಾಗದ ಪತ್ರದ ಡಿ ಅನುಸೂಚಿ ಸ್ವತ್ತು ದೊಡ್ಡಆಂಜೀನಪ್ಪ ರವರಿಗೆ ಹೋಗಿರುತ್ತದೆ. ವಿಭಾಗದಂತೆ ಸರ್ವೇ ನಂ.102/4 ಅವರಿಗೆ ಹೋಗಿರುವುದಿಲ್ಲ ಅದು ಚಿಕ್ಕಆಂಜೀನಪ್ಪನವರಿಗೆ ಬಂದಿರುತ್ತದೆ.

ಸರ್ವೇ ನಂ.102/4 ರ ಖಾತೆಯು ದೊಡ್ಡಆಂಜೀನಪ್ಪ ರವರ ಹೆಸರಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ.98/1 ರಲ್ಲಿ ನಾನು ಸ್ವಾಧೀನದಲ್ಲಿ ಇರುತ್ತೇನೆಂದರೆ ಸರಿಯಲ್ಲ, ಪ್ರತಿವಾದಿಯೆ ಸ್ವಾಧೀನದಲ್ಲಿರುತ್ತಾರೆ ಹಾಗೂ ಕೆ ಐ ಡಿ ಬಿ ಯಿಂದ ಪರಿಹಾರದ ಮೊತ್ತವನ್ನು ಅವರೇ ಪಡೆದಿರುತ್ತಾರೆ.

ಎಫ ಡಿ ಪಿ ನಂ.21/2013 ರಲ್ಲಿ ದೊಡ್ಡಆಂಜೀನಪ್ಪ ನವರು ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ಪಕ್ಷಗಾರರಾಗಿ ಸೇರಿರುತ್ತಾರೆ. ನಾನೇ ಅವರನ್ನು ಪಕ್ಷಗಾರರನ್ನಾಗಿ ಸೇರಿಸಿರುತ್ತೇನೆಂದರೆ ಸರಿಯಲ್ಲ. ದಾವಾಸ್ವತ್ತಿನ ಪ್ರತಿವಾದಿಯೆ ಸ್ವಾ ಧೀನದಲ್ಲಿದ್ದರೂ ಸಹ ನಾನು ಸ್ವಾ ಧೀನದಲ್ಲಿರುತ್ತೇನೆಂದು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ ನು ಡಿಯುತ್ತಿದ್ದೇನೆಂದರೆ ಸರಿಯಲ್ಲ. ಸ್ವಾ ಧೀನದಲ್ಲಿ ನಾನು ಇಲ್ಲದೆ ಇದ್ದರೂ ಸಹ ಸ್ವಾ ಧೀನದಲ್ಲಿ ಬಿಡಿಸಿಕೊಂಡಬೇಕೆಂದು ಪರಿಹಾರ ಕೇಳಿರುವುದಿಲ್ಲ ಎಂದರೆ ಸ್ವಾ ಧೀನದಲ್ಲಿ ನಾನೇ ಇರುತ್ತೇನೆ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**